# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 311(331) |
| ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ |
| ಉತ್ತರಿಸುವ ದಿನಾಂಕ | : | 07.07.2023 |
| ಉತ್ತರಿಸುವ ಸಚಿವರು | : | ಪರಿಶಿಷ್ಟ ವರ್ಗಗಳ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಸುಮಾರು ಕಡೆಗಳಲ್ಲಿ ಕೊರೆದ ಬಾವಿಗಳಲ್ಲಿ (109) ಆಳ ಮೀಟರ್‌ಗಳಲ್ಲಿ ಕೊರೆದ ಗುತ್ತಿಗೆ ದಾರರು ಅಧಿಕಾರಿಗಳು/ ಹೊರ ಮೂಲ ಸಿಬ್ಬಂದಿಗಳು ಶಾಮೀಲಾಗಿ 265ದು ಎಂದು ನಮೂದಿಸಿ ದುರುಪಯೋಗ ಎಸಗುತ್ತಿರುವುದ ರಿಂದ ರೈತರಿಗೆ ದೊರಕಬೇಕಾದ ಸರಿಯಾದ ಸೌಲಭ್ಯ ಸಿಗುತ್ತಿಲ್ಲ; | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಕೊರೆದ ಕೊಳವೆಬಾವಿಗಳನ್ನು 109 ಆಳ ಮೀಟರ್‌ಗಳಲ್ಲಿ ಕೊರೆದು ಗುತ್ತಿಗೆದಾರರು ಅಧಿಕಾರಿಗಳು/ ಹೊರ ಮೂಲ ಸಿಬ್ಬಂದಿಗಳು ಶಾಮೀಲಾಗಿ 265 ಎಂದು ನಮೂದಿಸಿ ದುರುಪಯೋಗ ಎಸಗುತ್ತಿರುವ ಕುರಿತು ನಿಗಮಕ್ಕೆ ಯಾವುದೇ ಮಾಹಿತಿ/ದೂರು ಸ್ವೀಕೃತವಾಗಿರುವುದಿಲ್ಲ.<br>ಫಲಾನುಭವಿಯ ಜಮೀನಲ್ಲಿ ಕೊರೆಯಲಾಗಿರುವ ಕೊಳವೆಬಾವಿಯ ಆಳದ ಕುರಿತಾಗಿ ನಿಗಮದ ನಿಗದಿತ ನಮೂನೆಗಳಲ್ಲಿ ನಿಖರವಾಗಿ ನಮೂದಿಸಿರುವ ಬಗ್ಗೆ ಪರಿಶೀಲಿಸಿ ನಮೂನೆಗೆ ಫಲಾನುಭವಿಯೇ ಸಹಿ ಮಾಡಿ ದೃಢೀಕರಿಸುತ್ತಾರೆ. |
| ಆ | ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು (ಮಾಹಿತಿ ನೀಡುವುದು) | ಫಲಾನುಭವಿಗಳ ಜಮೀನಿನಲ್ಲಿ ಕೊಳವೆಬಾವಿ ಕೊರೆಯುವ ಸಂದರ್ಭದಲ್ಲಿ ಕೊಳವೆಬಾವಿಯ ಆಳವನ್ನು ಪರಿಶೀಲಿಸಲು 2019-20 ನೇ ಸಾಲಿನಿಂದ ಅಂಡರ್ ವಾಟರ್ ಕ್ಯಾಮರಾ ಸಲಕರಣೆಯನ್ನು ಉಪಯೋಗಿಸಿ ನಿಖರವಾಗಿ ಕೊರೆದಿರುವ ಕೊಳವೆಬಾವಿ ಆಳವನ್ನು ಪರಿಶೀಲಿಸಿ ದೃಢೀಕರಿಸಿ ಸಲ್ಲಿಸಲು ಸೂಚಿಸಲಾಗಿರುತ್ತದೆ. |
| ಇ | ಕೊರೆದ ಕೊಳವೆ ಬಾವಿಗಳಿಗೆ ಮೋಟರ್ ಮತ್ತು ವಿದ್ಯುತ್ ಸಂಪರ್ಕ ಸರಿಯಾದ ಸಮಯಕ್ಕೆ ಕಲ್ಪಿಸ ಲಾಗದೇ ಸುಮಾರು ಕೊಳವೆ ಬಾವಿಗಳಲ್ಲಿ ಮಣ್ಣು ಬಿದ್ದು ಮುಚ್ಚಿದ ಕೊಳವೆ ಬಾವಿಗಳಿಗೆ ಒಂದು ವರ್ಷ ಗ್ಯಾರಂಟಿ ಅವಧಿಯು ಮುಗಿದರೂ ಸಹ ಕೊಳವೆ ಬಾವಿಯನ್ನು ರೀ ಪ್ಲೆಶಿಂಗ್ ಮಾಡದಿರಲು ಕಾರಣಗಳೇನು: | ಕೊಳವೆಬಾವಿಗಳಿಗೆ ಪಂಪು ಮೋಟಾರ್ ಹಾಗೂ ವಿದ್ಯುತ್ ಸಂಪರ್ಕವನ್ನು ಸರಿಯಾದ ಸಮಯಕ್ಕೆ ಕಲ್ಪಿಸಲಾಗದೇ ಹಾಗೂ ಮಣ್ಣು ಮುಚ್ಚಿದ ಕೊಳವೆಬಾವಿಗಳ ಕುರಿತು ನಿಗಮದಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ.<br>ಕೊಳವೆಬಾವಿ ಕೊರೆದು, ಪಂಪ್‌ಸೆಟ್ ಸರಬರಾಜು ಮಾಡಿ ಅಳವಡಿಸಿ ವಿದ್ಯುದ್ದೀಕರಣಗೊಳಿಸಲು ಎಲ್-1 ಆಗಿ ಆಯ್ಕೆಯಾದ ಗುತ್ತಿಗೆದಾರರಿಂದ ಪಂಪ್‌ಸೆಟ್ ಸರಬರಾಜು ಮಾಡಿಸಲಾಗುತ್ತದೆ. ವಿದ್ಯುತ್ ಸಂಪರ್ಕ ಕಲ್ಪಿಸಲು ನಿಗಮದಿಂದಲೇ ನೇರವಾಗಿ ಪ್ರತಿ ಕೊಳವೆಬಾವಿಗಳಿಗೆ ರೂ.50,000/-ದಂತೆ ಈಗಾಗಲೇ ಎಲ್ಲಾ ಎಸ್ಕಾಂಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುದಾನವನ್ನು ಮುಂಗಡವಾಗಿ ಬಿಡುಗಡೆ ಮಾಡಲಾಗುತ್ತದೆ. ಅದಲ್ಲದೇ ಆನ್-ಲೈನ್ ಮೂಲಕ ನೊಂದಣಿ ಮಾಡಿಸಿ, ವೈ.ಎಂ.ಡಿ / ಎಂ.ಎಸ್.ಡಿ ಮೊತ್ತವನ್ನು ನಿಗಮದಿಂದಲೇ ಭರಿಸಿ ಸಿ.ಆರ್. ಸಲ್ಲಿಸಿ ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಕೊಳವೆ ಬಾವಿಗಳಲ್ಲಿ ಮಣ್ಣು ಮುಚ್ಚಿದ ಪ್ರಕರಣಗಳು ಇದ್ದಲ್ಲಿ ಅಂತಹ ಕೊಳವೆ ಬಾವಿಗಳನ್ನು ಗ್ಯಾರಂಟಿ ಅವಧಿಯಲ್ಲಿ ರೀ-ಪ್ಲೇಶಿಂಗ್ ಮಾಡಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಈ | ವ್ಯವಸ್ಥಾಪಕರುಗಳಿಗೆ ಹಾಗೂ ಸಿಬ್ಬಂದಿಗಳಿಗೆ ಕಳೆದ ಎರಡು ಮೂರು ವರ್ಷಗಳಿಂದ ಮನವಿ ಮಾಡಿಕೊಂಡಿದ್ದರು ಸಹ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು: ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು: ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು: ಇಂತಹ ಪ್ರಕರಣಗಳನ್ನು ತಡೆಗಟ್ಟಲು ಎಷ್ಟು ದಿನಗಳಲ್ಲಿ ಕ್ರಮವಹಿಸಲಾಗುವುದು? (ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಿಂದ ನಿಗಮಕ್ಕೆ ಬೀದರ್ ಜಿಲ್ಲೆಯ ವ್ಯವಸ್ಥಾಪಕರುಗಳ ಹಾಗೂ ಸಿಬ್ಬಂದಿಗಳ ಕುರಿತು ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. ಪ್ರಕರಣಗಳು ದಾಖಲಾದ್ದಲ್ಲಿ ಅಂತಹ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು. |

ಸಕಇ 45 ಎಸ್‌ಟಿಸಿ 2023

(ನಾಗೇಂದ್ರ.ಬಿ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವಜನ ಸೇವಾ ಮತ್ತು ಕ್ರೀಡಾ ಸಚಿವರು